ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ವಿ ಟಿ ಯು ಅಧಿನಿಯಮ ೧೯೯೪" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)

Visvesvaraya Technological University

(State University of Government of Karnataka Established as per the VTU Act, 1994)

ಡಾ. ಪ್ರಸಾದ ಬಿ. ರಾಂಪುರೆ ಎಮ್.ಇ., ಪಿಹೆಚ್.ಡಿ.
ಕುಲಸಚಿವರು

ದೂರವಾಣಿ ಸಂ: (0831) – 2498100
ಫ್ಯಾಕ್ಸ್ ಸಂ : (0831) – 2405467

ಉಲ್ಲೇಖ ಸಂ.: ವಿತಾವಿ/ಪಿಎಸ್/2026-27/ISB

ದಿನಾಂಕ: 30 JUL 2026

ಸುತ್ತೋಲೆ

ವಿಷಯ: 2026-27ನೇ ಶೈಕ್ಷಣಿಕ ಸಾಲಿನ ವೃತ್ತಿಪರ ಇಂಜಿನಿಯರಿಂಗ್ ಆರ್ಕಿಟೆಕ್ಚರ್ ಕೋರ್ಸುಗಳಿಗೆ ಸಂಬಂಧಿಸಿದಂತೆ ಪ್ರವೇಶಾತಿ ಶುಲ್ಕ ಹಾಗೂ ಸಮ್ಮತಾಭಿಪ್ರಾಯ ಒಡಂಬಡಿಕೆ (Consensual Agreement) ವಿವರಗಳನ್ನು ಸಂಬಂಧಿತ ಕಾಲೇಜುಗಳ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸುವ ಕುರಿತು.

ಉಲ್ಲೇಖ: 1) ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:ಇಡಿ 200 ಟಿಇಸಿ 2026, ದಿನಾಂಕ 20.07.2026.

2) ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರ ಅನುಮೋದನೆ ದಿನಾಂಕ: 29.07.2026

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 25.06.2026 ರಂದು ಸರ್ಕಾರದ ಆದೇಶ ಸಂಖ್ಯೆ: ಇಡಿ 77 ಟಿಇಸಿ 2026 ರ ಅನ್ವಯ 2026-27ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಶುಲ್ಕ ಮತ್ತು ಸೀಟು ಹಂಚಿಕೆ ನಿಗದಿಪಡಿಸಿ ಹೊರಡಿಸಿದ್ದು, ಈ ಕುರಿತಂತೆ, ಕರ್ನಾಟಕ ಸರ್ಕಾರವು ಖಾಸಗಿ ವೃತಿಪರ ಶಿಕ್ಷಣ ಸಂಸ್ಥೆಗಳ ಒಕ್ಕೂಟಗಳಾದ KUPECA, KRLMCA ಹಾಗೂ AMPCK ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದ ಹಾಗೂ ಶುಲ್ಕ ನಿಗಧಿಯ ವಿವರಗಳು ಸಾರ್ವಜನಿಕರಿಗೆ/ವಿದ್ಯಾರ್ಥಿಗಳಿಗೆ ಲಭ್ಯಪಡಿಸುವ ಮೂಲಕ ಪಾರದರ್ಶಕತೆ ಕಾಪಾಡಿಕೊಳ್ಳುವುದು ಅಗತ್ಯವಿರುವುದರಿಂದ ಎಲ್ಲಾ ಖಾಸಗಿ ವೃತ್ತಿಪರ ಇಂಜಿನಿಯರಿಂಗ್/ಆರ್ಕಿಟೆಕ್ಚರ್ ಸಂಸ್ಥೆ/ ಕಾಲೇಜುಗಳು ಈ ಕೆಳಕಂಡ ಅಂಶಗಳನ್ನು ಕಾಲೇಜಿನ/ ಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಹಾಗೂ ಸದರಿ ವಿಷಯ ಕುರಿತು ಕ್ರಮ ಕೈಗೊಂಡಿರುವ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಉಲ್ಲೇಖಿತ (1) ರ ಪತ್ರದಲ್ಲಿ ಕೋರಿರುತ್ತಾರೆ.

1. ಸರ್ಕಾರದ ಆದೇಶ ಸಂಖ್ಯೆ: ಇಡಿ 77 ಟಿಇಸಿ 2026, ದಿನಾಂಕ 25.06.2026 ರ ಪ್ರತಿಯನ್ನು ಸಂಬಂಧಪಟ್ಟ ಕಾಲೇಜಿನ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
2. ಕರ್ನಾಟಕ ಸರ್ಕಾರ ಹಾಗೂ ಆಯಾ ಕಾಲೇಜಿಗೆ ಸಂಬಂಧಿತ ಒಕ್ಕೂಟದ ನಡುವೆ ಮಾಡಿಕೊಂಡಿರುವ ಸಮ್ಮತಾಭಿಪ್ರಾಯ ಒಡಂಬಡಿಕೆ (Consensual Agreement) ಪ್ರತಿಯನ್ನು ಕಾಲೇಜಿನ/ಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
3. ವೃತ್ತಿಪರ ಇಂಜಿನಿಯರಿಂಗ್ ಕೋರ್ಸುಗಳಿಗೆ ಕಾಲೇಜುಗಳಲ್ಲಿನ ನಿಗಧಿಪಡಿಸಿರುವ ಶುಲ್ಕದ ಸಂಪೂರ್ಣ ವಿವರಗಳನ್ನು (Fee Structure) ಸ್ಪಷ್ಟವಾಗಿ ಹಾಗೂ ಸಾರ್ವಜನಿಕರಿಗೆ ಸುಲಭವಾಗಿ ಲಭ್ಯವಾಗುವಂತೆ ಆಯಾ ಕಾಲೇಜಿನ/ಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.

ಈ ಕುರಿತಂತೆ, ಮೇಲ್ಕಂಡ ಅಂಶಗಳನ್ನು ತಮ್ಮ ಕಾಲೇಜಿನ/ಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಹಾಗೂ ಸದರಿ ವಿಷಯ ಕುರಿತು ಕ್ರಮ ಕೈಗೊಂಡಿರುವ ಅನುಪಾಲನಾ ವರದಿಯನ್ನು ಮಿಂಚಂಚೆ: registrar@vtu.ac.in ಮುಖಾಂತರ ಕುಲಸಚಿವರ ಕಚೇರಿಗೆ ಸಲ್ಲಿಸುವಂತೆ ಈ ಮೂಲಕ ಸೂಚಿಸಲಾಗಿದೆ.

Raw/30/7/26

ಕುಲಸಚಿವರು

Bchitti

ಇವರಿಗೆ,

ಪ್ರಾಚಾರ್ಯರು, ವಿ.ತಾ.ವಿ.ಯ. ಘಟಕ, ಸಂಯೋಜನೆ ಹೊಂದಿದ ಹಾಗೂ ಸ್ವಾಯತ್ತ ತಾಂತ್ರಿಕ ಮಹಾವಿದ್ಯಾಲಯಗಳು ಹಾಗೂ ಸ್ಕೂಲ್ ಆಫ್ ಆರ್ಕಿಟೆಕ್ಚರ್.

ಪ್ರತಿ ಇವರಿಗೆ,

1) ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ, ಇವರಿಗೆ, ಅವರ ಕಾರ್ಯದರ್ಶಿಗಳ ಮುಖಾಂತರ.
2) ಪ್ರಾದೇಶಿಕ ನಿರ್ದೇಶಕರು (ಪ್ರಭಾರಿ), ವಿ.ತಾ.ವಿ.ಯ ಬೆಂಗಳೂರು, ಬೆಳಗಾವಿ, ಕಲಬುರಗಿ ಹಾಗೂ ಮೈಸೂರು ಪ್ರಾದೇಶಿಕ ಕೇಂದ್ರಗಳು.
3) ನಿರ್ದೇಶಕರು, ITISMU, ವಿ.ತಾ.ವಿ., ಬೆಳಗಾವಿ ಇವರ ಮಾಹಿತಿಗಾಗಿ ಹಾಗೂ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವ ಕುರಿತು.
4) ವಿಶೇಷಾಧಿಕಾರಿಗಳು, ಶೈಕ್ಷಣಿಕ ವಿಭಾಗ, ವಿ.ತಾ.ವಿ., ಬೆಳಗಾವಿ ಇವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.